ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಹೈಗೂರಿನ ವಿಚಾರದ ಬಗ್ಗೆ ಮಾನ್ಯ ನಮ್ಮ ಸ್ನೇಹಿತರು ಏನು ಹೇಳಿದರು ಅದರ ಬಗ್ಗೆ ವಿಚಾರಿಸುತ್ತೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ ಹಾಗೂ ಇತರ ಸ್ನೇಹಿತರು ಹೇಳಿದ್ದಾರೆ 4–5 ಮಕ್ಕಳು ಇರುವಂತಹ ಪರಿಸ್ಥಿತಿ ಬಂದರೆ ಅಂತಹ ಶಾಲೆ ಅಥವಾ ಕಾಲೇಜುಗಳನ್ನು ನಡೆಸುವುದಕ್ಕೆ ವಿರೋಧವಾಗಿದ್ದೇವೆ. ಅದು ಸರಿಯಲ್ಲ.

ವಿಷಯ:- ಗ್ರಾಮೀಣ ಗುಂಪು ಜೀವವಿಮಾ ಯೋಜನೆ.

337(2193) **ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):-** ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಪುರಸ್ಕೃತ ಗ್ರಾಮೀಣ ಗುಂಪು ಜೀವವಿಮಾ ಯೋಜನೆಯ ವಿವರಗಳೇನು?

ಆ) 1995–96ನೇ ಸಾಲಿಗೆ ಧಾರವಾಡ ಜಿಲ್ಲೆಗೆ ಈ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾದ ಹಣವೆಷ್ಟು? ಖರ್ಚಾದ ಹಣವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) 1995–96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ ರೂ. 4,74,150–00ಗಳನ್ನು ದಿನಾಂಕ: 27–2–96ರಂದು ಬಿಡುಗಡೆ ಮಾಡಲಾಯಿತು. 1995–96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಹಣ ಖರ್ಚು ಮಾಡಿರುವುದಿಲ್ಲ.

ಅನುಬಂಧ–1

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2193ರ(ಅ)ಗೆ ಉತ್ತರ:-

ಭಾರತ ಸರ್ಕಾರದ ಆದೇಶದ ಮೇರೆಗೆ ಭಾರತೀಯ ಜೀವವಿಮೆ ನಿಗಮವು ಗ್ರಾಮೀಣ ಜನರ ಸಾಮಾಜಿಕ ಭದ್ರತೆಗಾಗಿ ಗ್ರಾಮೀಣ ಗುಂಪು ಜೀವವಿಮಾ ಯೋಜನೆಯನ್ನು ದಿನಾಂಕ: 15–8–95 ರಿಂದ ಪ್ರಾರಂಭಿಸಿದೆ. ರಾಜ್ಯ ಸರ್ಕಾರವು ಈ ಯೋಜನೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆ ಅಡಿಯಲ್ಲಿ ವಿಮೆ ಮಾಡಿಸಿದ ಜನರು 60 ವರ್ಷಗಳಿಗೆ ಒಳಪಟ್ಟಿದ್ದಲ್ಲಿ ಅವರು ರೂ. 5,000–00ಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಯೋಜನೆಯ ಮುಖ್ಯಾಂಶಗಳು ಈ ಕೆಳಕಂಡಂತಿವೆ:-

ಅ) ಈ ಯೋಜನೆಗೆ ಸೇರಲು (ಕನಿಷ್ಟ) 20 ವರ್ಷ ಮತ್ತು ಗರಿಷ್ಟ 50 ವರ್ಷ.

ಆ) 60 ವರ್ಷದವರೆಗಿನ ಸಾವನ್ನು ಈ ಯೋಜನೆಯು ಒಳಪಟ್ಟಿರುತ್ತದೆ.

ಇ) ಯಾವುದೇ ರೀತಿಯ ಸಾವು ಅವಧಿಯೊಳಗೆ ಸಂಭವಿಸಿದರೆ ರೂ. 5000–00 ಸೌಲಭ್ಯವು ಸಾವಿಗೀಡಾದ ಕುಟುಂಬದವರಿಗೆ ದೊರೆಯುತ್ತದೆ.

ಈ) ವಿಮಾ ಪತ್ರವನ್ನು ಪ್ರತಿ ವರ್ಷ ಆಗಸ್ಟ್ 15ರಂದು ಮರುನೋಂದಾಯಿಸಬೇಕಾಗಿರುತ್ತದೆ.

ಉ) ಈ ಯೋಜನೆಯಲ್ಲಿ ಎರಡು ವಿಧದ ವಿಮಾ ಸೌಲಭ್ಯಗಳಿವೆ:-

1) **ಸಾಮಾನ್ಯ:-** ಪ್ರತಿಯೊಬ್ಬರಿಗೂ ಈ ಯೋಜನೆಯಲ್ಲಿ ಸೇರಲು ಅವಕಾಶವಿದೆ. ವಿಮಾ ಕಂತನ್ನು ಅರ್ಜಿದಾರರೇ ಸಂಪೂರ್ಣವಾಗಿ ಪಾವತಿ ಮಾಡಬೇಕಾಗಿರುತ್ತದೆ.

2) **ಸಹಾಯಧನ ಘೋಷಿತ:-** ಈ ಯೋಜನೆಯು ಬಡತನ ರೇಖೆಯ ಒಳಗಿರುವ ಕುಟುಂಬದಲ್ಲಿ ಒಬ್ಬ ವ್ಯಕ್ತಿಗೆ ಮಾತ್ರ ಅನ್ವಯಿಸುತ್ತದೆ. ಈ ಯೋಜನೆಯಲ್ಲಿ ವಿಮಾ ಕಂತನ್ನು ಫಲಾನುಭವಿಯು ಶೇ. 50 ರಷ್ಟನ್ನು ಮಾತ್ರ ಪಾವತಿ ಮಾಡಿ ಇನ್ನುಳಿದ ಶೇ. 50 ರಷ್ಟನ್ನು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪಾಲುದಾರರಾಗಿ ಪಾವತಿ-ಮಾಡುತ್ತವೆ.

ಊ) ವಿವಿಧ ರೀತಿಯ ವಿಮಾ ಕಂತುಗಳು ವಿವಿಧ ವಯಸ್ಸಿನ ಅರ್ಜಿದಾರರಿಗೆ ಅನ್ವಯಿಸುತ್ತದೆ. ಉದಾ: 20 ರಿಂದ 40 ವರ್ಷ, 40 ರಿಂದ 60 ವರ್ಷ.

ಋ) ಈ ಯೋಜನೆಯನ್ನು ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಮೂಲಕ ಅನುಷ್ಠಾನಗೊಳಿಸಲಾಗುವುದು.

ಎ) ವಿಮಾ ದರಗಳು ಈ ಕೆಳಗಿನಂತಿವೆ:-

ವಯಸ್ಸಿನ ಅಂತರ	ಆ–ಮಾದರಿ (ಸಾಮಾನ್ಯ) ವಿಮಾದಾರನು ಕಟ್ಟಬೇಕಾಗಿರುವ ಸಂಪೂರ್ಣ ಹಣ	ಆ–ಮಾದರಿ (ಸಹಾಯಧನ ಘೋಷಿತ)		ವಿಮಾ ದರ (ಫಲಾನುಭವಿ)	ಒಟ್ಟು
		ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ		
20-40 ವರ್ಷ ವಯಸ್ಸು	60	15	15	30	60
40-60 ವರ್ಷ ವಯಸ್ಸು	70	17.5	17.5	35	70

ಈ ಯೋಜನೆಯ ಸೌಲಭ್ಯಗಳು ಇತರೆ ಯೋಜನೆಯಾದ ಎನ್.ಎಫ್.ಬಿ.ಎಸ್., ಎಲ್.ಎ.-ಎಲ್.ಜಿ.ಐ. ಯೋಜನೆಗಳ ಜೊತೆಗೆ ಅನ್ವಯಿಸುತ್ತದೆ.

1995–96ನೇ ಸಾಲಿನಲ್ಲಿ ಗ್ರಾಮೀಣ ಗುಂಪು ಜೀವವಿಮಾ ಯೋಜನೆಯಡಿ ಮಾರ್ಚ್ 96ರ ಅಂತ್ಯಕ್ಕೆ ರೂ. 0.991 ಲಕ್ಷಗಳನ್ನು ಖರ್ಚು ಮಾಡಿದ್ದು, 3108 ಜನರಿಗೆ ವಿಮೆ ಮಾಡಿಸಿದೆ. ಹಾಗೂ 1996–97ನೇ ಸಾಲಿನಲ್ಲಿ ಜೂನ್ 96ರ ಅಂತ್ಯಕ್ಕೆ ರೂ. 1.920 ಲಕ್ಷಗಳನ್ನು ಖರ್ಚು ಮಾಡಿದ್ದು, 6015 ಜನರಿಗೆ ವಿಮೆ ಮಾಡಿಸಲಾಗಿದೆ.

ಶ್ರೀ ಯು.ಬಿ. ಬಣಕಾರ್:- ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದಲ್ಲಿ ಒಬ್ಬ ವ್ಯಕ್ತಿಗೆ 20ರಿಂದ 60ನೇ ವರ್ಷದಲ್ಲಿ ಯಾವುದೇ ರೀತಿಯಲ್ಲಿ ಸಾವು ಸಂಭವಿಸಿದರೆ ಐದು ಸಾವಿರ ರೂಪಾಯಿಗಳ ಸೌಲಭ್ಯ ಸಾವಿಗೀಡಾದ ಕುಟುಂಬದವರಿಗೆ ದೊರೆಯುತ್ತದೆ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಮಾನ್ಯ ಮಂತ್ರಿಗಳು ಕೊಟ್ಟ ಉತ್ತರವನ್ನು ನೋಡಿದರೆ ರಾಜ್ಯ ಸರ್ಕಾರ ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ. ಕಳೆದ ವರ್ಷ ಧಾರವಾಡ ಜಿಲ್ಲೆಗೆ ಬಿಡುಗಡೆ ಮಾಡಿದ 4,17,500–00 ರೂಪಾಯಿಗಳಲ್ಲಿ ಒಂದು ಪೈಸೆ ಕೂಡ ಖರ್ಚು ಮಾಡಿರುವುದಿಲ್ಲ. ಈ ಯೋಜನೆಯನ್ನು ತಾಲ್ಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ ಅನುಷ್ಠಾನಗೊಳಿಸಬೇಕು. ಆದರೆ ದುರ್ದೈವ ಯಾವುದೇ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ತಹಸೀಲ್ದಾರ್‌ರವರ ಕಚೇರಿಗೆ ಮಾಹಿತಿ ಇಲ್ಲ. ಅರ್ಜಿ ಕೇಳಿದರೂ ಸಹ ಅರ್ಜಿ ನಮೂನೆ ಸಹ ಇಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ಈ ವರ್ಷವಾದರೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಸಾವಿಗೀಡಾದ ವ್ಯಕ್ತಿಗಳಿಗೆ ಉಪಯೋಗ ಸಿಗುವುದಕ್ಕೋಸ್ಕರ ಪ್ರಚಾರ ಮಾಡಿ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಈ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಈ ಯೋಜನೆಯ ಉಪಯೋಗವನ್ನು ನಾವು ಈಗಾಗಲೇ ಪ್ರಚಾರ ಮಾಡಿದ್ದೇವೆ. ಗ್ರಾಮ ಪಂಚಾಯತಿಯವರು ಇದರ ಪ್ರಯೋಜನವನ್ನು ಪಡೆಯಬೇಕು ಎಂದು ಮಾಡಿದ್ದೇವೆ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇಕಡ 50–50 ಭಾಗದಿಂದ ನಡೆಸತಕ್ಕಂಥಾದ್ದು. ಇದರಲ್ಲಿ 40 ವರ್ಷದಿಂದ 60 ವರ್ಷ ಇರತಕ್ಕಂಥವರು ಮತ್ತು 20 ರಿಂದ 40 ವರ್ಷ ಇರತಕ್ಕಂಥವರು ಎಂದು ಈ ರೀತಿ ಎರಡು ಭಾಗ ಮಾಡಿದ್ದೇವೆ. ಇದರಲ್ಲಿ 60 ರೂಪಾಯಿಯ ಪ್ರಿಮಿಯಮ್ ಪ್ರತಿ ವರ್ಷ ಕಟ್ಟಬೇಕು. 30 ರೂಪಾಯಿಯಲ್ಲಿ 15 ರೂಪಾಯಿ ರಾಜ್ಯ ಸರ್ಕಾರ, 15 ರೂಪಾಯಿ ಕೇಂದ್ರ ಸರ್ಕಾರ ಕಟ್ಟುತ್ತದೆ. ಆಕಸ್ಮಾತ್ ಆ ಅವಧಿಯೊಳಗಾಗಿ ಮನುಷ್ಯನಿಗೆ ಸಾವು ಸಂಭವಿಸಿದರೆ ಅವನಿಗೆ ಐದು ಸಾವಿರ ರೂಪಾಯಿ ಕೊಡತಕ್ಕಂಥ ಯೋಜನೆ ಇದೆ. ಅದನ್ನು ಮಾಡತಕ್ಕಂಥ ಗ್ರಾಮ ಪಂಚಾಯತಿಯವರಿಗೆ ನಾವು ಸಹಾಯ ಧನವನ್ನು ಕೂಡ ಕೊಡುತ್ತಿದ್ದೇವೆ. ಈಗ 4,75,000–00 ರೂಪಾಯಿ ಧಾರವಾಡ ಜಿಲ್ಲೆಯಲ್ಲಿ ಬಿಡುಗಡೆಯಾಗಿದೆ. ಕೆಲವು ಗ್ರಾಮಪಂಚಾಯಿತಿಗಳು ಈ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಇದನ್ನು ವ್ಯಾಪಕವಾಗಿ ಅಂಚೆ ಕಛೇರಿ ಇಲಾಖೆಯವರು, ಜೀವವಿಮಾ ಇಲಾಖೆಯವರು ಹಾಗೂ ನಮ್ಮ ಗ್ರಾಮ ಪಂಚಾಯತಿಯವರು ಇದಕ್ಕೆ ಹೆಚ್ಚು ಆಸಕ್ತಿಯನ್ನು ತಾಳಬೇಕಾಗುತ್ತದೆ. ಯಾವ ಗ್ರಾಮ ಮಟ್ಟದಲ್ಲಿ

ಹಾಗೂ ಮುಂದಾಲೋಚನೆ ಉಳ್ಳವರು ಇರುತ್ತಾರೆ ಅವರು ಇದರ ಲಾಭವನ್ನು ಸಂಪೂರ್ಣವಾಗಿ ಪಡೆದಿದ್ದಾರೆ. ತಮಗೆ ಉದಾಹರಣೆಗೆ ಹೇಳುವುದಾದರೆ ಬೇರೆ ಬೇರೆ ಕಡೆಯಲ್ಲಿ ಕೂಡ ಈ ತರಹದ ಕೆಲಸವಾಗಿರತಕ್ಕಂಥ ಜಿಲ್ಲೆಗಳ ವಿವರಗಳು ನಮ್ಮ ಹತ್ತಿರ ಇದೆ. ಆದರೆ ನಿಮ್ಮ ಧಾರವಾಡ ಜಿಲ್ಲೆಯಲ್ಲಿ ತಾವೇ ಇದರ ಬಗ್ಗೆ ಹೆಚ್ಚು ಆಸಕ್ತಿ ತಾಳಿದರೆ ನಿಮ್ಮ ಹಿರೇಕೆರೂರಿನ ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಯು.ಬಿ. ಬಣಕಾರ್:- ಮಾನ್ಯ ಅಧ್ಯಕ್ಷರೇ, ಇದು ಕೇವಲ ಹಿರೇಕೆರೂರು ತಾಲ್ಲೂಕಿನ ಪ್ರಶ್ನೆಯಲ್ಲ. ಇಡೀ ಧಾರವಾಡ ಜಿಲ್ಲೆಗೆ ಬಿಡುಗಡೆಯಾದಂತಹ ನಾಲ್ಕು ಲಕ್ಷ ರೂಪಾಯಿಗಳಲ್ಲಿ ಒಂದು ಪೈಸೆ ಕೂಡ ಖರ್ಚಾಗಿಲ್ಲ, ಎಂದರೆ ಇದು ಪ್ರಚಾರ ದೃಷ್ಟಿಯಿಂದ ಈ ರೀತಿಯಾಗಿದೆ ಎಂದು ಮೇಲೆದ್ದು ಕಾಣುತ್ತಿದೆ. ಈ ಯೋಜನೆಯಲ್ಲಿ ಏನೂ ಕುಂದುಕೊರತೆ ಇಲ್ಲ. ಆದರೆ ಅನುಷ್ಠಾನಗೊಳಿಸುವಲ್ಲಿ ಇದು ತೊಂದರೆಯಾಗಿದೆ. ಇದು ಆಗಸ್ಟ್ 15ನೇ ತಾರೀಖಿನಂದು ಪ್ರತಿವರ್ಷ ನೋಂದಣಿಯಾಗಬೇಕು. ಈ ಸಲ ಆಗಸ್ಟ್ 15ನೇ ತಾರೀಖಿಗಾದರೂ ಪ್ರಚಾರ ಮಾಡಿ. ಮಾನ್ಯ ಸಚಿವರು ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮುಖಾಂತರ ಪ್ರಚಾರ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತಿಗೂ ಸಹ ಯಾವ ಪಂಚಾಯತಿಯಲ್ಲೂ ಇದರ ಬಗ್ಗೆ ಮಾಹಿತಿ ಇಲ್ಲ. ಇನ್ನು ಮುಂದಾದರೂ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿ ಸಿಡಿಲು ಬಡಿದು ಒಬ್ಬ ಮನುಷ್ಯ ಸತ್ತುಹೋದ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗಾಗಿ ಕಳೆದ ಆರು ತಿಂಗಳಿನಿಂದ ಓಡಾಡುತ್ತಿದ್ದೇವೆ. ಒಂದು ಪೈಸೆ ಸಿಕ್ಕಿಲ್ಲ. ಆ ಯೋಜನೆಯಲ್ಲಿ ಅವರ ಕುಟುಂಬದವರಿಗೆ ಹಣ ಸಿಕ್ಕದರೆ ತಕ್ಷಣ ರಿಲೀಫ್ ಸಿಕ್ಕುತ್ತದೆ. ಆದುದರಿಂದ ಇದು ಅತ್ಯಂತ ಅಗತ್ಯ ಇರುವಂತಹ ಒಳ್ಳೆಯ ಕಾರ್ಯಕ್ರಮ. ಅದನ್ನು ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗೆ ತಲುಪಿಸಿ, ಇದಕ್ಕೆ ಜಿಲ್ಲಾಧಿಕಾರಿಗಳು ವಿಶೇಷವಾದಂತಹ ಗಮನಕೊಟ್ಟು, ಜಿಲ್ಲಾ ಪಂಚಾಯಿತಿಯವರೇ ಹಣ ಉಪಯೋಗ ಆಗುವಂತಹ ರೀತಿಯಲ್ಲಿ, ಇದು ಇಡೀ ರಾಜ್ಯದಲ್ಲಿ ಅನ್ವಯವಾಗುವಂತಾಗಬೇಕು. ಅವರು ಅವರ ಜಿಲ್ಲೆಯ ಬಗ್ಗೆ ಪ್ರಶ್ನೆ ಕೇಳಿದ್ದರೂ ಸಹ ಇಡೀ ರಾಜ್ಯದಲ್ಲಿ ಈ ಒಂದು ಕಾರ್ಯಕ್ರಮ ಸರಿಯಾದ ರೀತಿಯಲ್ಲಿ ಜಾರಿಗೊಂಡಿಲ್ಲ. ಆದುದರಿಂದ ಇಡೀ ರಾಜ್ಯದಲ್ಲಿ ಇದನ್ನು ಅನುಷ್ಠಾನಗೊಳಿಸುವುದಕ್ಕೆ ವಿಶೇಷವಾದಂತಹ ಗಮನಹರಿಸಿ ನೋಡಿಕೊಳ್ಳುತ್ತೀರೋ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಸಿಡಿಲು ಬಡಿದು ಆಕಸ್ಮಾತ್ ಸಾವಿಗೀಡಾಗಿದ್ದರೆ ಆಶಾಕಿರಣ ಕಾರ್ಯಕ್ರಮದಲ್ಲಿ ಹಣ ಬಿಡುಗಡೆಯಾಗುತ್ತದೆ. ಪ್ರಕೃತಿ ವಿಕೋಪ ನಿಧಿಯಿಂದಲೂ ಕೂಡ ಹಣ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆದರೆ ಜೀವವಿಮಾಗೆ ಸಂಬಂಧಪಟ್ಟ ಹಾಗೆ ಪ್ರೀಮಿಯಮ್ ಅನ್ನು ಅವರು ಪ್ರತಿ ವರ್ಷವೂ ಕಟ್ಟಬೇಕಾಗುತ್ತದೆ. ಕೊನೇಪಕ್ಷ 30 ರೂಪಾಯಿಯಾದರೂ

ಕಟ್ಟಬೇಕಾಗುತ್ತದೆ. 15 ರೂಪಾಯಿ ಕೇಂದ್ರ ಸರ್ಕಾರ, 15 ರೂಪಾಯಿ ರಾಜ್ಯ ಸರ್ಕಾರ ಕಟ್ಟುತ್ತದೆ. ಕಳೆದ ವರ್ಷ ಒಂದು ಕೋಟಿ ರೂಪಾಯಿಗಳನ್ನು ಈ ವಿಚಾರದಲ್ಲಿ ಖರ್ಚುಮಾಡಿದ್ದೇವೆ. ಈಗಾಗಲೇ 3100 ಜನ ಜೀವವಿಮೆ ಮಾಡಿಸಿದ್ದಾರೆ. ಈ ವರ್ಷ 6,015 ಜನರನ್ನು ನಾವು ಗುರಿ ಇಟ್ಟುಕೊಂಡಿದ್ದೇವೆ. ಅದಕ್ಕಾಗಿ ಸುಮಾರು ಎರಡು ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ತಾವು ಹೇಳಿದಂತೆ ಹೆಚ್ಚು ವ್ಯಾಪಕವಾದಂತಹ ಪ್ರಚಾರವನ್ನು ಮಾಡಬೇಕಾಗಿದೆ. ಆದುದರಿಂದ ಇದನ್ನು ಖಂಡಿತವಾಗಿ ಗಮನದಲ್ಲಿಟ್ಟುಕೊಂಡು ಪ್ರಚಾರ ಮಾಡುತ್ತೇವೆ.

ವಿಷಯ:- ಕಾರವಾರ ಸಿವಿಲ್ ಆಸ್ಪತ್ರೆಗೆ ಔಷಧಿ ಸರಬರಾಜು.

338(2329) **ಶ್ರೀ ವಸಂತ ಆಸ್ನೋಟಿಕರ್ (ಕಾರವಾರ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ ಸಿವಿಲ್ ಆಸ್ಪತ್ರೆಗೆ 1996–97ರ ಸಾಲಿನಲ್ಲಿ ಔಷಧಿಗಾಗಿ ನೀಡಿದ ಹಣವೆಷ್ಟು?

ಆ) ಆಸ್ಪತ್ರೆಯಲ್ಲಿ ಈಗ ಸಾಕಷ್ಟು ಔಷಧಿಗಳಿವೆಯೇ?

ಇ) ಹುಚ್ಚುನಾಯಿ ಕಡಿತ ಹಾಗೂ ಹಾವು ಕಡಿತದ ಔಷಧಿಗಳು ಈ ಆಸ್ಪತ್ರೆಯಲ್ಲಿ ದೊರೆಯುವುದೇ?

ಡಾ।। ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) 1996–97ನೇ ಸಾಲಿನ ಆಯವ್ಯಯದಲ್ಲಿ (ದಿನಾಂಕ: 1–4–1996 ರಿಂದ 30–9–1996ರ ಅವಧಿಗೆ) ಶೇಕಡ 40ರ ಅಂದಾಜಿನಲ್ಲಿ ರೂ. 3 ಲಕ್ಷಗಳನ್ನು ನೇರ ಖರೀದಿಗಾಗಿ ಮತ್ತು ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರಿನಿಂದ ಸರಬರಾಜು ಆಗುವ ಔಷಧ ಮತ್ತು ರಾಸಾಯನಿಕಗಳಿಗೆ ರೂ. 1.00 ಲಕ್ಷಗಳನ್ನು (ಒಟ್ಟು 4 ಲಕ್ಷ ರೂಗಳು) ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಆ) ಸಾಕಷ್ಟು ಔಷಧಿಗಳಿರುತ್ತವೆ.

ಇ) ದೊರೆಯುತ್ತದೆ, ಹುಚ್ಚುನಾಯಿ ಕಡಿತಕ್ಕೆ 1996–97ನೇ ಸಾಲಿನಲ್ಲಿ 168 ವಯಲ್‌ಗಳ ಔಷಧಿ ಸರಬರಾಜಾಗಿತ್ತು. ಈಗ 9 ವಯಲ್‌ಗಳು ಇವೆ. (1 ವಯಲ್‌ನ ಪರಿಮಾಣ 30 ಎಂಎಲ್ ಇರುತ್ತದೆ) ಹಾವು ಕಡಿತಕ್ಕೆ 1996–97ನೇ ಸಾಲಿನಲ್ಲಿ 100 ವಯಲ್‌ಗಳ ಔಷಧಿ ಸರಬರಾಜಾಗಿತ್ತು. ಈಗ 40 ವಯಲ್‌ಗಳು ಇರುತ್ತವೆ.

ಶ್ರೀ ವಸಂತ ಆಸ್ನೋಟಿಕರ್ ಕಮಲಾಕರ:- ಮಾನ್ಯ ಅಧ್ಯಕ್ಷರೇ, ಕಾರವಾರ ಜಿಲ್ಲೆ ಆಸ್ಪತ್ರೆಗೆ 1996ನೇ ಸಾಲಿನಲ್ಲಿ ದಿನಾಂಕ 1.4.96 ಹಾಗೂ 30.9.96ರಲ್ಲಿ ನಾಲ್ಕು ಲಕ್ಷ ರೂಪಾಯಿಗಳ ಔಷಧವನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ನಮಗೆ ಬೇಕಾದಂತಹ ಯಾವುದೇ ಔಷಧಿ ಸಿಗುತ್ತಿಲ್ಲ. ಆದ್ದರಿಂದ ಸಚಿವರು ಯೋಗ್ಯ ರೀತಿಯಲ್ಲಿ ಔಷಧವನ್ನು ಬಿಡುಗಡೆ ಮಾಡುವಂತಹ ವ್ಯವಸ್ಥೆ ಮಾಡಬೇಕು.